ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿಯೂ, ತಲಾ 20ರಂತೆ ಕೊಡತಕ್ಕ ಕಾರ್ಯಕ್ರಮ ಹಾಕಿಕೊಂಡು, ಅದನ್ನು ವಿತರಣೆ ಮಾಡುತ್ತಿದ್ದೇವೆ.

ರಾಜಾಜಿನಗರ ಎಂಟ್ರೆನ್ಸ್‌ನಲ್ಲಿರುವ ಎಂ.ಇ.ಐ ಫ್ಯಾಕ್ಟರಿಯಿಂದ ರಾಮ್‌ಕುಮಾರ್ ಮಿಲ್‌ವರೆಗೆ ಮೇಲು ಸೇತುವೆಯ ನಿರ್ಮಾಣ ಕುರಿತು

183: ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜಾಜಿನಗರ ಎಂಟ್ರೆನ್ಸ್‌ನಲ್ಲಿರುವ ಎಂ.ಇ.ಐ. ಫ್ಯಾಕ್ಟರಿಯಿಂದ ರಾಮ್‌ಕುಮಾರ್ ಮಿಲ್‌ವರೆಗೆ ವಾಹನ ಒತ್ತಡ ಜಾಸ್ತಿಯಾಗಿರುವುದರಿಂದ ಓವರ್ ಬ್ರಿಡ್ಜ್ ರಸ್ತೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಆ. ತೆಗೆದುಕೊಂಡಿದ್ದಲ್ಲಿ ಅದರ ಅಂದಾಜು ಹಣವೆಷ್ಟು ಹಾಗೂ ಇದುವರೆವಿಗೂ ಎಷ್ಟು ಹಣ ಖರ್ಚು ಮಾಡಲಾಗಿದೆ;

ಇ. ಆ ಓವರ್ ಬ್ರಿಡ್ಜ್ ಕೆಲಸ ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಣ್ಣ:– ಮಾನ್ಯ ಅಧ್ಯಕ್ಷರೇ, ರಾಜಾಜಿನಗರ ಎಂಟ್ರೆನ್ಸ್‌ನಲ್ಲಿ, ಎಂ.ಇ.ಐ. ಫ್ಯಾಕ್ಟರಿಯಿಂದ, ರಾಮ್‌ಕುಮಾರ್ ಮಿಲ್ಸ್‌ನವರೆಗೂ ಫ್ಲೈ ಓವರ್ ರಸ್ತೆ ಮಾಡುವ ಯೋಜನೆ ಇದೆಯೋ ಎಂದು ಕೇಳಿದ್ದೆ, "ಇಲ್ಲ" ಎಂದು ಹೇಳಿದ್ದಾರೆ. ಇದು ತುಂಬಾ ಅವಶ್ಯಕತೆ ಇದೆ. ಏಕೆಂದರೆ, ಅಲ್ಲಿ ವಾಹನಗಳ ಒತ್ತಡ ತುಂಬಾ ಜಾಸ್ತಿಯಾಗಿದೆ; ಬಡಾವಣೆಗಳು ಕೂಡ ಜಾಸ್ತಿಯಾಗಿವೆ. ನಾನು ಹಿಂದೆ ಮಹಾನಗರ ಪಾಲಿಕೆಯ ಸದಸ್ಯನಾಗಿದ್ದಾಗ, ಇದರ ಬಗ್ಗೆ ಕೆಲಸ ಮಾಡಬೇಕೆಂದು ನಕ್ಷೆ ಕೂಡ ತಯಾರಾಗಿತ್ತು. ದಯಮಾಡಿ ಈ ಕೆಲಸವನ್ನು ಮಾಡಿಸಬೇಕು. ಮತ್ತು ರಸ್ತೆ ಅಗಲ ಮಾಡತಕ್ಕ ಕೆಲಸ ಈಗಾಗಲೇ ಸ್ಥಗಿತವಾಗಿದೆ, ಹೀಗೆ 2ವರ್ಷಗಳಿಂದ ನಿಂತಿದೆ. ಈ ಕೆಲಸವೂ ಬಹುಬೇಗನೆ ಆಗಬೇಕು, ಇಲ್ಲದಿದ್ದರೆ, ಅಲ್ಲಿ ವಾಹನಗಳ ಒತ್ತಡ ಜಾಸ್ತಿಯಾಗಿ, ಅಪಘಾತಗಳು ತುಂಬಾ ಆಗುತ್ತವೆ. ಈಗಾಗಲೇ ಆ ರಸ್ತೆಯಲ್ಲಿ ಸುಮಾರು 2–3 ಜನ ಮರಣ ಹೊಂದಿದ್ದಾರೆ. ಈ ದೃಷ್ಟಿಯಿಂದ ಮಾನ್ಯ ಸಚಿವರಲ್ಲಿ ತಮ್ಮ ಮುಖಾಂತರ ಕೇಳುತ್ತೇನೆ. ಮೇಲೆ ವೈಡನ್ ಮಾಡತಕ್ಕ ರಸ್ತೆ ಮತ್ತು ಓವರ್ ಬ್ರಿಡ್ಜ್ ಕಟ್ಟಿಸತಕ್ಕ ವ್ಯವಸ್ಥೆ ಮಾಡಬೇಕು; ಇಲ್ಲದಿದ್ದರೆ, ಬೆಂಗಳೂರು ನಗರದಲ್ಲಿ, ವಾಹನಗಳ ಒತ್ತಡ ಜಾಸ್ತಿಯಾಗಿ, ನಾಗರೀಕರು ಓಡಾಡುವುದೇ ಕಷ್ಟವಾಗುತ್ತಿದೆ. ಆದ್ದರಿಂದ ತಮ್ಮ ಮೂಲಕ ನಗರಾಭಿವೃದ್ಧಿ ಮಂತ್ರಿಗಳನ್ನು ಕೇಳುತ್ತಿದ್ದೇನೆ. ಅಲ್ಲಿ ಓವರ್ ಬ್ರಿಡ್ಜ್ ಮತ್ತು ವೈಡನ್ ಆಗತಕ್ಕ ರಸ್ತೆಯನ್ನು ಬಹುಬೇಗನೆ ಮಾಡುವುದಕ್ಕೆ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಚೌಡರೆಡ್ಡಿ:– ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರು ಹೇಳಿರುವಂಥಾದ್ದು ನಿಜ. ಅಲ್ಲಿ ಟ್ರಾಫಿಕ್ ಜಾಸ್ತಿಯಾಗಿದೆ. ರಾಜಾಜಿನಗರ ಎಂಟ್ರೆನ್ಸ್‌ನಲ್ಲಿ ಟ್ರಾಫಿಕ್ ವಿಪರೀತ ಜಾಸ್ತಿಯಾಗಿದೆ. ಅದಕ್ಕೋಸ್ಕರ ರೋಡ್ ವೈಡನ್ ಮಾಡಬೇಕೆಂದು 14.96 ಲಕ್ಷ ರೂಪಾಯಿಗಳ ಎಸ್ಟಿಮೇಟ್

ಸಿದ್ಧಮಾಡಿ, ಕೆಲಸ ನಡೆಯುತ್ತಿತ್ತು. ಈ ರೀತಿ ನಡೆಯುತ್ತಿರತಕ್ಕ ಸಂದರ್ಭದಲ್ಲಿ ಮಿನರ್ವ ಮಿಲ್ಸ್‌ನವರು ಬಂದು, ಆ ಜಾಗ ನಮಗೆ ಸೇರಿದ್ದು ಎಂದು ಪ್ರೊಟೆಸ್ಟ್ ಮಾಡಿ, ಗಲಾಟೆಯಾದ ಮೇಲೆ, ಕಾರ್ಪೊರೇಷನ್‌ನವರು ತಹಶೀಲ್ದಾರ್‌ರವರನ್ನು ಕೇಳಿದರೆ, ಅದು ಅವರದಲ್ಲವೆಂದು ಹೇಳಿದ್ದಾರೆ. ಆದರೆ, ಆ ಟೈಮ್‌ನಲ್ಲಿದ್ದ ಮುಖ್ಯ ಕಾರ್ಯದರ್ಶಿಯವರು ವಿಸಿಟ್ ಮಾಡಿ, ಆ ಟೈಮ್‌ನಲ್ಲಿ, ಹೆಚ್.ಯು.ಡಿ. ಸೆಕ್ರಟರಿಯವರೂ ವಿಸಿಟ್ ಮಾಡಿ, ಸ್ವಲ್ಪ ಕೆಲಸ ನಿಲ್ಲಿಸಿ, ಅವರನ್ನು ಕರೆಸ ಮಾತನಾಡಿ, ತೀರ್ಮಾನ ಮಾಡೋಣವೆಂದು ಹೇಳಿದ್ದಕ್ಕೋಸ್ಕರ, 6 ತಿಂಗಳಿಂದ ಕೆಲಸ ಸ್ಥಗಿತಗೊಂಡಿದೆ. ಇದನ್ನು ಬೇಗನೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದಲ್ಲದೆ, ಇನ್ನೊಂದು ಮಹಾರಾಣಿ ಸರ್ಕಲ್‌ನಿಂದ ರಾಜಾಜಿನಗರ ಎಂಟ್ರೆನ್ಸ್‌ವರೆಗೂ ಫ್ಲೈ ಓವರ್ ಮಾಡಬೇಕೆಂದು ಎಸ್ಟಿಮೇಟ್ ರೆಡಿ ಮಾಡುತ್ತಿದ್ದಾರೆ. ಇದೆಲ್ಲ ಹಣದ ಪರಿಸ್ಥಿತಿ ನೋಡಿಕೊಂಡು ಆಗುತ್ತದೆ. ಒಟ್ಟಿನಲ್ಲಿ ಆಲ್ಲಿಯ ಕೆಲಸ ಶುರು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಲಕ್ಷ್ಮಣ್:– ಮಾನ್ಯ ಅಧ್ಯಕ್ಷರೇ, ಆಲ್ಲಿ ರಸ್ತೆ ಅಗಲ ಮಾಡತಕ್ಕ ಕೆಲಸ, ಸುಮಾರು ಒಂದು ವರ್ಷದಿಂದ ನಿಂತುಹೋಗಿದೆ. ದಯಮಾಡಿ, ಇದು ಬೇಗ ಆಗಬೇಕು. ಇಲ್ಲದಿದ್ದರೆ, ಬಹಳ ತೊಂದರೆಯಾಗುತ್ತದೆ. ಮಹಾನಗರ ಪಾಲಿಕೆಯ ಇಂಜಿನಿಯರುಗಳು ಏನು ಮಾಡುತ್ತಿದ್ದಾರೆ. ಇವರು ಸಾರ್ವಜನಿಕರಿಗೆ ಏನು ಕೆಲಸವಾಗಬೇಕೋ ಆದನ್ನು ಮಾಡುತ್ತಾ ಇಲ್ಲ. ಸುಮ್ಮನೆ ಫುಟ್‌ಪಾತ್‌ನಲ್ಲಿ ಮಾಡತಕ್ಕ ಕೆಲಸಗಳೇ ಜಾಸ್ತಿಯಾಗಿವೆ. ಆದ್ದರಿಂದ, ಸಾರ್ವಜನಿಕ ಹಿತದೃಷ್ಟಿಯಿಂದ ಏನು ಕೆಲಸ ಆಗಬೇಕೊ ಆ ಕೆಲಸಗಳು ಆಗತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕಾಗಿದೆ.

ಶ್ರೀ ಚೌಡರೆಡ್ಡಿ:– ಮಾನ್ಯ ಅಧ್ಯಕ್ಷರೇ, ಆದರ ಮೇಲೆ ಯಾವುದೇ ಸ್ಟೇ ಇಲ್ಲ. ಮಿನರ್ವ ಮಿಲ್‌ನವರು ಎಲ್ಲಿಯೂ ಕೋರ್ಟಿಗೆ ಹೋಗಿಲ್ಲ, ಸ್ಟೇ ಮಾಡಿಸಿಲ್ಲ. ಏಕೆಂದರೆ, ಅಂದಿದ್ದ ಮುಖ್ಯ ಕಾರ್ಯದರ್ಶಿಯವರು ಮೌಖಿಕವಾಗಿ ಹೇಳಿದ್ದಕ್ಕೆ ನಿಂತಿದೆ. ಇದರ ಬಗ್ಗೆ ಬೇಗ ಕೆಲಸ ಪ್ರಾರಂಭಿಸುವಂತೆ ಹೇಳಿ ಮಾಡಿಸುತ್ತೇನೆ.

ಅಧ್ಯಕ್ಷರು:– 450 (2156)ನೇ ಪ್ರಶ್ನೆಯನ್ನು ನಗರಾಭಿವೃದ್ಧಿ ಮಂತ್ರಿಗಳಿಗೆ ಕಳುಹಿಸಲಾಗಿದೆ.

ಶ್ರೀಮತಿ ಮೋಟಮ್ಮ:– ಇದು ನಗರಾಭಿವೃದ್ಧಿ ಮಂತ್ರಿಗಳಿಗೆ ಸಂಬಂಧಪಡುವುದಿಲ್ಲ. ಏಕೆಂದರೆ, ಇದು ಎಸ್.ಸಿ.ಪಿ. ಸ್ಕೀಮ್‌ನಲ್ಲಿ ಮನೆ ಕಟ್ಟಿಸಿಕೊಡುವಂಥಾದ್ದು; ಇದು ನಗರಾಭಿವೃದ್ಧಿ ಮಂತ್ರಿಗಳಿಗೆ ಹೇಗೆ ಬರುತ್ತದೆ ? ದುಡ್ಡು ರೂರಲ್ ಡೆವಲಪ್‌ಮೆಂಟ್‌ಗೆ ಬರುತ್ತದೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):– ಇದೇನಾಗಿದೆ ಎಂದರೆ, ವಿಶೇಷ ಘಟಕ ಯೋಜನೆ, ಹರಿಜನ ಗಿರಿಜನರಿಗೆ ಸಂಬಂಧಪಟ್ಟಿದ್ದು ಮತ್ತು ಇದು ಚಿಕ್ಕಮಗಳೂರು ಜಿಲ್ಲಾಪರಿಷತ್ ಎಂದು ಹೇಳಿದುದರಿಂದ, ವರ್ಗಾವಣೆ ಮಾಡಲಾಯಿತು.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಇರೆಗ್ಯುಲಾರಿಟೀಸ್, ಏನು ಅಕ್ರಮ ನಡೆದಿದೆ, ಮುನಿಸಿಪಾಲಿಟಿ ದುಡ್ಡನ್ನು, ಜಿಲ್ಲಾಪರಿಷತ್ ಖರ್ಚು ಮಾಡಿಕೊಳ್ಳುವುದಕ್ಕೆ ಎಂದು ಕೇಳಿರತಕ್ಕ ಪ್ರಶ್ನೆ. ನಮಗೆ ಗೊತ್ತಿದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ, ಈ ಜನರಿಗೆ 18ಪರ್ಸೆಂಟ್ ಹಣ ಖರ್ಚಾಗುತ್ತಿದೆಯೋ ಇಲ್ಲವೋ ಎಮ್ಮವುದನ್ನು ನೋಡಬೇಕಾಗಿದೆ.

ಶ್ರೀ ಧರ್ಮಸಿಂಗ್:– ಇದು ವರ್ಗಾವಣೆ ಏಕೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಅವರು ವಿಶೇಷವಾಗಿ ಚಿಕ್ಕಮಗಳೂರು ವಿಚಾರ ಕೇಳಿದ್ದಾರೆ. ತಾವು ಹೆಲ್ಡ್ ಓವರ್ ಮಾಡಿ; ಸೋಮವಾರ ಇದಕ್ಕೆ ಉತ್ತರ ಕೊಡುತ್ತೇನೆ.